# ಅಕ್ಟೋಬರ್ 2018ರ
# ಮಾಸಿಕ ಪ್ರಗತಿ ವರದಿ

# ಮಿಷನ್ ನಿರ್ದೇಶಕರ ಮೇಜಿನಿಂದ

## ಜಿಲ್ಲಾ ಶ್ರೇಯಾಂಕ

| ಶ್ರೇಯಾಂಕ | ಜಿಲ್ಲೆ | ಜಿಲ್ಲೆ | ಶ್ರೇಯಾಂಕ |
|---|---|---|---|
| 1 | ಬಾಗಲಕೋಟೆ | ಧಾರವಾಡ | 28 |
| 2 | ಬೆಂಗಳೂರು ಗ್ರಾಮಾಂತರ | ಮಂಡ್ಯ | 29 |
| 3 | ಕಲಬುರಗಿ | ಬೆಂಗಳೂರು | 30 |

**31/10/2018 ರಂದು 12:00:00 ರಂದು ದಾಖಲೆಗಳಂತೆ**

## ತಾಲ್ಲೂಕುಗಳ ಶ್ರೇಯಾಂಕ

| ಶ್ರೇಯಾಂಕ | ತಾಲ್ಲೂಕು | ಜಿಲ್ಲೆ |
|---|---|---|
| 1 | ಹಳಿಯಾಳ | ಉತ್ತರ ಕನ್ನಡ |
| 2 | ಮೂಡಿಗೆರೆ | ಚಿಕ್ಕಮಗಳೂರು |
| 3 | ಹುಬಳ್ಳಿ | ಧಾರವಾಡ |

**31/10/2018 ರಂದು 12:00:00 ರಂದು ದಾಖಲೆಗಳಂತೆ**

## ಅರ್ಜಿಗಳ ಸ್ವೀಕೃತಿ ಮತ್ತು ವಿಲೇವಾರಿ ಸ್ವರೂಪ:

| | ಸ್ವೀಕೃತಿಗಳು | ವಿಲೇವಾರಿ |
|---|---|---|
| ಅಕ್ಟೋಬರ್ –2018 | 2155318 | 2528505 |
| ಒಟ್ಟಾರೆ ವಿಲೇವಾರಿ | 180400003 | 179685829 |

**31/10/2018 ರಂದು 12:00:00 ರಂದು ದಾಖಲೆಗಳಂತೆ**

**ಬಾಕಿ ಪ್ರಕರಣಗಳು:** ತಿಂಗಳ ಅಂತ್ಯಕ್ಕೆ ಒಟ್ಟು 39,599 ಅವಧಿ ಮೀರಿ ಬಾಕಿ ಪ್ರಕರಣಗಳು ಕಂಡುಬಂದಿರುತ್ತವೆ

**ವಿಳಂಬ ವಿಲೇವಾರಿ:** ಪ್ರಸ್ತುತ ತಿಂಗಳನಲ್ಲಿ 1,88,062 ಅರ್ಜಿಗಳನ್ನು ವಿಳಂಬವಾಗಿ ವಿಲೇವಾರಿ ಮಾಡಲಾಗಿರುತ್ತದೆ.

**7 ಮತ್ತು 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು:** :ಪ್ರಸ್ತುತ ತಿಂಗಳನಲ್ಲಿ 1,104 ಕಛೇರಿಗಳು 7 ಮತ್ತು 7ಕ್ಕಿಂತ ಹೆಚ್ಚು ಬಾರಿ ವಿಳಂಬ ವಿಲೇವಾರಿ ಮಾಡಿವೆ.

**ರಾಜೀವ್ ಚಾವ್ಲಾ ಭಾ.ಆ.ಸೇ**
**ಮಿಷನ್ ನಿರ್ದೇಶಕರು**
**ಸಕಾಲ**

# ಅಡಕಗಳು


| ಅಧ್ಯಾಯ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| ೧ಅ | ಪ್ರಗತಿ ಶ್ರೇಯಾಂಕ– ಜಿಲ್ಲಾವಾರು (ಅಕ್ಟೋಬರ್–೨೦೧೮) | 1 |
| ೧ಆ | ಪ್ರಗತಿ ಶ್ರೇಯಾಂಕ– ತಾಲ್ಲೂಕುವಾರು (ಅಕ್ಟೋಬರ್–೨೦೧೮) | 2 |
| ೨ಅ | ಒಟ್ಟಾರೆ ಸ್ವೀಕೃತಿ ಮತ್ತು ವಿಲೇವಾರಿ– ಜಿಲ್ಲಾವಾರು | 3 |
| ೨ಆ | ಒಟ್ಟಾರೆ ಸ್ವೀಕೃತಿ ಮತ್ತು ವಿಲೇವಾರಿ– ಇಲಾಖಾವಾರು | 4 |
| ೨ಇ | ಸ್ವೀಕೃತಿ ಮತ್ತು ವಿಲೇವಾರಿ – ಜಿಲ್ಲಾವಾರು (ಅಕ್ಟೋಬರ್–೨೦೧೮) | 6 |
| ೨ಈ | ಸ್ವೀಕೃತಿ ಮತ್ತು ವಿಲೇವಾರಿ – ಇಲಾಖಾವಾರು (ಅಕ್ಟೋಬರ್–೨೦೧೮) | 7 |
| ೨ಉ | ವಿಳಂಬ ವಿಲೇವಾರಿ – ಜಿಲ್ಲಾವಾರು (ಅಕ್ಟೋಬರ್–೨೦೧೮) | 8 |
| ೨ಊ | ವಿಳಂಬ ವಿಲೇವಾರಿ – ಇಲಾಖಾವಾರು (ಅಕ್ಟೋಬರ್–೨೦೧೮) | 9 |
| ೨ಋ | ೭ ಹಾಗೂ ೭ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು –ಜಿಲ್ಲಾವಾರು (ಅಕ್ಟೋಬರ್–೨೦೧೮) | 10 |
| ೨ಎ | ಪರಿಹಾರ ಕೋರಿ ಅರ್ಜಿ– ಇಲಾಖಾವಾರು | 11 |
| ೩ | ಪತ್ರಿಕಾ ವರದಿಗಳು ಮತ್ತು ಘಟನೆಗಳು | 12 |

# ಅಧ್ಯಾಯ ೧೮: ಪ್ರಗತಿ ಶ್ರೇಯಾಂಕ –ಜಿಲ್ಲಾವಾರು

| ಕ್ರ.ಸಂ | ಜಿಲ್ಲೆ | ಸಕಾಲ ಸಮಯಬದ್ದ ವಿಲೇವಾರಿ ಶ್ರೇಯಾಂಕ | 1 ಲಕ್ಷ ಜನಸಂಖ್ಯೆಯ ಸಕಾಲ ಸ್ವೀಕೃತಿಯ ಪ್ರಗತಿ ಶ್ರೇಯಾಂಕ | ಒಟ್ಟಾರೆ ಪ್ರಗತಿ ಶ್ರೇಯಾಂಕ ಶೇಕಡಾವಾರು |
|---|---|---|---|---|
| 1 | ಬಾಗಲಕೋಟೆ | 4 | 7 | 1 |
| 2 | ಬೆಂಗಳೂರು ಗ್ರಾಮಾಂತರ | 12 | 3 | 2 |
| 3 | ಕಲಬುರಗಿ | 10 | 5 | 3 |
| 4 | ಚಿಕ್ಕಬಳ್ಳಾಪುರ | 5 | 10 | 4 |
| 5 | ರಾಯಚೂರು | 20 | 1 | 5 |
| 6 | ವಿಜಯಾಪುರ | 17 | 4 | 6 |
| 7 | ದಾವಣಗೆರೆ | 9 | 13 | 7 |
| 8 | ತುಮಕೂರು | 7 | 15 | 8 |
| 9 | ಉಡುಪಿ | 2 | 20 | 9 |
| 10 | ಗದಗ | 11 | 12 | 10 |
| 11 | ಚಿತ್ರದುರ್ಗ | 6 | 19 | 11 |
| 12 | ಚಿಕ್ಕಮಗಳೂರು | 17 | 9 | 12 |
| 13 | ಶಿವಮೊಗ್ಗ | 3 | 23 | 13 |
| 14 | ಉತ್ತರ ಕನ್ನಡ | 1 | 27 | 14 |
| 15 | ಯಾದಗಿರಿ | 28 | 2 | 15 |
| 16 | ಕೋಲಾರ | 24 | 6 | 16 |
| 17 | ಬಳ್ಳಾರಿ | 13 | 17 | 17 |
| 18 | ಕೊಪ್ಪಳ | 26 | 8 | 18 |
| 19 | ರಾಮನಗರ | 19 | 16 | 19 |
| 20 | ಹಾವೇರಿ | 15 | 22 | 20 |
| 21 | ಚಾಮರಾಜ ನಗರ | 7 | 30 | 21 |
| 22 | ಕೊಡಗು | 29 | 11 | 22 |
| 23 | ಬೀದರ್ | 27 | 14 | 23 |
| 24 | ಹಾಸನ | 25 | 18 | 24 |
| 25 | ಬೆಳಗಾವಿ | 14 | 29 | 25 |
| 26 | ದಕ್ಷಿಣ ಕನ್ನಡ | 16 | 28 | 26 |
| 27 | ಮೈಸೂರು | 21 | 24 | 27 |
| 28 | ಧಾರವಾಡ | 21 | 25 | 28 |
| 29 | ಮಂಡ್ಯ | 23 | 26 | 29 |
| 30 | ಬೆಂಗಳೂರು | 30 | 21 | 30 |

**31/10/2018 ರಂದು 12:00:00 ರಂದು ದಾಖಲೆಗಳಂತೆ**

## ಅಧ್ಯಾಯ ೧೮ಆ: ಪ್ರಗತಿ ಶ್ರೇಯಾಂಕ–ತಾಲ್ಲೂಕಾವಾರು (ಟಾಪ್ ಶ್ರೇಣಿ–೨೫)

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಸಕಾಲ ಸಮಯಬದ್ದ ವಿಲೇವಾರಿ ಶ್ರೇಯಾಂಕ | ಹತ್ತು ಸಾವಿರ ಜನಸಂಖ್ಯೆಯ ಸಕಾಲ ಸ್ವೀಕೃತಿಯ ಪ್ರಗತಿ ಶ್ರೇಯಾಂಕ | ಒಟ್ಟಾರೆ ಪ್ರಗತಿ ಶ್ರೇಯಾಂಕ ಶೇಕಡಾವಾರು |
|---|---|---|---|---|---|
| 1 | ಉತ್ತರ ಕನ್ನಡ | ಹಳಿಯಾಳ | 2 | 10 | 1 |
| 2 | ಚಿಕ್ಕಮಗಳೂರು | ಮೂಡಿಗೇರೆ | 8 | 18 | 2 |
| 3 | ಧಾರವಾಡ | ಹುಬ್ಳಿ | 31 | 4 | 3 |
| 4 | ಗದಗ | ಮುಂಡರಗಿ | 19 | 23 | 4 |
| 5 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 35 | 9 | 5 |
| 6 | ದಾವಣಗೆರೆ | ದಾವಣಗೆರೆ | 31 | 17 | 6 |
| 7 | ಉತ್ತರ ಕನ್ನಡ | ಯಲ್ಲಾಪುರ | 1 | 49 | 7 |
| 8 | ಬಾಗಲಕೋಟೆ | ಮುದೋಳ | 19 | 39 | 8 |
| 9 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | 43 | 16 | 9 |
| 10 | ಬಾಗಲಕೋಟೆ | ಬಾಗಲಕೋಟೆ | 26 | 35 | 10 |
| 11 | ಚಿಕ್ಕಬಳ್ಳಾಪುರ | ಸಿಡ್ಲಗಟ್ಟಾ | 19 | 46 | 11 |
| 12 | ಉಡುಪಿ | ಉಡುಪಿ | 19 | 48 | 12 |
| 13 | ಕಲಬುರಗಿ | ಗುಲ್ಬರ್ಗಾ | 53 | 15 | 13 |
| 14 | ಕಲಬುರಗಿ | ಚಿತಾಪುರ | 57 | 19 | 14 |
| 15 | ವಿಜಯಾಪುರ | ಬಿಜಾಪುರ | 48 | 28 | 15 |
| 16 | ಶಿವಮೊಗ್ಗ | ಶಿವಮೊಗ್ಗ | 12 | 65 | 16 |
| 17 | ಬಾಗಲಕೋಟೆ | ಬೀಳಗಿ | 63 | 20 | 17 |
| 18 | ಉತ್ತರ ಕನ್ನಡ | ಕಾರವಾರ | 43 | 42 | 18 |
| 19 | ಕಲಬುರಗಿ | ಸೆಡಂ | 19 | 67 | 19 |
| 20 | ತುಮಕೂರು | ತುಮಕೂರು | 50 | 37 | 20 |
| 21 | ರಾಯಚೂರು | ರಾಯಚೂರು | 88 | 8 | 21 |
| 22 | ಚಿಕ್ಕಬಳ್ಳಾಪುರ | ಗುಡಿಬಂಡಾ | 62 | 34 | 22 |
| 23 | ಹಾವೇರಿ | ಹಾವೇರಿ | 57 | 39 | 23 |
| 24 | ದಾವಣಗೆರೆ | ಚನ್ನಗಿರಿ | 19 | 77 | 24 |
| 25 | ಬಾಗಲಕೋಟೆ | ಬದಾಮಿ | 14 | 84 | 25 |

**31/10/2018 ರಂದು 12:00:00 ರಂದು ದಾಖಲೆಗಳಂತೆ**

# ಅಧ್ಯಾಯ ೨ಅ: ಒಟ್ಟಾರೆ ಸ್ವೀಕೃತಿ ಮತ್ತು ವಿಲೇವಾರಿ– ಜಿಲ್ಲಾವಾರು

| ಕ್ರ.ಸಂ. | ಜಿಲ್ಲೆ | ಒಟ್ಟಾರೆ ಜಿಎಸ್ ಸಿ ರಸೀದಿಗಳ ಸಂಖ್ಯೆ | ಒಟ್ಟಾರೆ ವಿಲೇವಾರಿಯಾದ ರಸೀದಿಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ ಮೊದಲ ಮನವಿಗಳು | ಒಟ್ಟಾರೆ ಮೊದಲ ಮನವಿಗಳ ವಿಲೇವಾರಿ ಸಂಖ್ಯೆ | ಒಟ್ಟಾರೆ ಎರಡನೆಯ ಮನವಿಗಳ ಸ್ವೀಕೃತಿ ಸಂಖ್ಯೆ | ಒಟ್ಟಾರೆ ಎರಡನೆಯ ಮನವಿಗಳ ವಿಲೇವಾರಿ ಸಂಖ್ಯೆ | ನಿಗದಿ ಪಡಿಸಿದ ದಿನಾಂಕದ ನಂತರ ಬಾಕಿ ಇರುವ ಸಂಖ್ಯೆ |
|---|---|---|---|---|---|---|---|---|
| 1 | ಬೆಂಗಳೂರು | 29260635 | 29148835 | 726 | 481 | 25 | 7 | 9278 |
| 2 | ಬೆಳಗಾವಿ | 11905664 | 11875548 | 153 | 84 | 3 | 3 | 5758 |
| 3 | ಮೈಸೂರು | 8577858 | 8549033 | 70 | 55 | 1 | 1 | 2640 |
| 4 | ಮಂಡ್ಯ | 6201875 | 6179628 | 61 | 39 | 3 | 2 | 2503 |
| 5 | ಕೊಪ್ಪಳ | 4013257 | 3995852 | 75 | 35 | 0 | 0 | 1802 |
| 6 | ಬಳ್ಳಾರಿ | 7215711 | 7190708 | 214 | 113 | 38 | 35 | 1707 |
| 7 | ಧಾರವಾಡ | 5380174 | 5360883 | 52 | 51 | 34 | 34 | 1681 |
| 8 | ರಾಯಚೂರು | 5727878 | 5698184 | 244 | 210 | 82 | 54 | 1647 |
| 9 | ವಿಜಯಾಪುರ | 6182527 | 6156812 | 67 | 55 | 2 | 1 | 1579 |
| 10 | ಕಲಬುರಗಿ | 6920783 | 6873597 | 138 | 130 | 5 | 4 | 1151 |
| 11 | ಯಾದಗಿರಿ | 3128131 | 3102067 | 73 | 72 | 1 | 1 | 1066 |
| 12 | ಬೆಂಗಳೂರು ಗ್ರಾಮಾಂತರ | 3279626 | 3265121 | 58 | 35 | 0 | 0 | 1041 |
| 13 | ಕೋಲಾರ | 5320221 | 5301186 | 77 | 76 | 3 | 3 | 1017 |
| 14 | ರಾಮನಗರ | 3353464 | 3344101 | 16 | 12 | 0 | 0 | 922 |
| 15 | ದಕ್ಷಿಣ ಕನ್ನಡ | 5803180 | 5784337 | 10 | 9 | 0 | 0 | 776 |
| 16 | ಬೀದರ್ | 4536379 | 4508324 | 121 | 89 | 4 | 2 | 615 |
| 17 | ಶಿವಮೊಗ್ಗ | 5236962 | 5222966 | 27 | 26 | 0 | 0 | 556 |
| 18 | ಹಾಸನ | 5814614 | 5792753 | 37 | 30 | 1 | 1 | 537 |
| 19 | ಕೊಡಗು | 1444518 | 1438458 | 4 | 4 | 0 | 0 | 514 |
| 20 | ಗದಗ | 3249439 | 3237712 | 26 | 17 | 3 | 3 | 500 |
| 21 | ತುಮಕೂರು | 8944429 | 8898641 | 94 | 82 | 2 | 2 | 459 |
| 22 | ಬಾಗಲಕೋಟೆ | 5562294 | 5549967 | 202 | 43 | 12 | 2 | 458 |
| 23 | ಹಾವೇರಿ | 4122373 | 4110135 | 54 | 51 | 9 | 9 | 356 |
| 24 | ಉತ್ತರ ಕನ್ನಡ | 4359655 | 4349029 | 28 | 26 | 2 | 2 | 223 |
| 25 | ದಾವಣಗೆರೆ | 5509731 | 5486754 | 345 | 316 | 73 | 73 | 222 |
| 26 | ಚಿಕ್ಕಮಗಳೂರು | 3496495 | 3483703 | 29 | 19 | 3 | 3 | 178 |
| 27 | ಚಾಮರಾಜ ನಗರ | 2774165 | 2764791 | 37 | 36 | 1 | 1 | 176 |
| 28 | ಚಿತ್ರದುರ್ಗ | 4893182 | 4865568 | 39 | 36 | 2 | 2 | 126 |
| 29 | ಚಿಕ್ಕಬಳ್ಳಾಪುರ | 4669087 | 4650255 | 63 | 56 | 1 | 1 | 95 |
| 30 | ಉಡುಪಿ | 3515696 | 3500881 | 24 | 24 | 1 | 1 | 16 |
| | ಒಟ್ಟು: | **180400003** | **179685829** | **3164** | **2312** | **311** | **247** | **39599** |

31/10/2018 ರಂದು 12:00:00 ರಂದು ದಾಖಲೆಗಳಂತೆ

# ಅಧ್ಯಾಯ ೨ಆ: ಒಟ್ಟಾರೆ ಸ್ವೀಕೃತಿ ಮತ್ತು ವಿಲೇವಾರಿ– ಇಲಾಖಾವಾರು

| ಕ್ರ.ಸಂ. | ಮುಖ್ಯ ಇಲಾಖೆ | ಒಟ್ಟಾರೆ ಜಿಎಸ್ ಸಿ ರಸೀದಿಗಳ ಸಂಖ್ಯೆ | ಒಟ್ಟಾರೆ ವಿಲೇವಾರಿಯಾದ ರಸೀದಿಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ ಮೊದಲ ಮನವಿಗಳು | ಒಟ್ಟಾರೆ ಮೊದಲ ಮನವಿಗಳ ವಿಲೇವಾರಿ ಸಂಖ್ಯೆ | ಒಟ್ಟಾರೆ ಎರಡನೆಯ ಮನವಿಗಳ ಸ್ವೀಕೃತಿ ಸಂ | ಒಟ್ಟಾರೆ ಎರಡನೆಯ ಮನವಿಗಳ ವಿಲೇವಾರಿ ಸಂಖ್ಯೆ | ನಿಗದಿ ಪಡಿಸಿದ ದಿನಾಂಕದ ನಂತರ ಬಾಕಿ ಇರುವ ಸಂಖ್ಯೆ |
|---|---|---|---|---|---|---|---|---|
| 1 | ಕಂದಾಯ ಇಲಾಖೆ | 87830729 | 87316354 | 2702 | 2021 | 285 | 230 | 28657 |
| 2 | ನಗರಾಭಿವೃದ್ಧಿ ಇಲಾಖೆ | 489460 | 476910 | 95 | 33 | 6 | 2 | 4105 |
| 3 | ಸಾರಿಗೆ ಇಲಾಖೆ | 34620253 | 34593824 | 7 | 5 | 0 | 0 | 1783 |
| 4 | ಕಂದಾಯ ಇಲಾಖೆ(IGRS) | 12255300 | 12248333 | 0 | 0 | 0 | 0 | 1561 |
| 5 | ಒಳಾಡಳಿತ ಇಲಾಖೆ | 7211416 | 7167927 | 26 | 7 | 0 | 0 | 1453 |
| 6 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 7783665 | 7771921 | 186 | 146 | 16 | 11 | 748 |
| 7 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ (ಪರಿಸರ) ಇಲಾಖೆ | 35795 | 33943 | 0 | 0 | 0 | 0 | 358 |
| 8 | ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು) | 4654756 | 4644489 | 63 | 43 | 0 | 0 | 242 |
| 9 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1839103 | 1837264 | 0 | 0 | 0 | 0 | 143 |
| 10 | ಕಾರ್ಮಿಕ ಇಲಾಖೆ | 950925 | 942478 | 0 | 0 | 0 | 0 | 97 |
| 11 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 5226 | 5132 | 0 | 0 | 0 | 0 | 88 |
| 12 | ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ | 5923565 | 5922856 | 2 | 2 | 1 | 1 | 73 |
| 13 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 1721654 | 1716462 | 0 | 0 | 0 | 0 | 62 |
| 14 | ಇಂಧನ ಇಲಾಖೆ | 16164 | 13344 | 0 | 0 | 0 | 0 | 62 |
| 15 | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ | 62095 | 61563 | 0 | 0 | 0 | 0 | 53 |
| 16 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 729540 | 724943 | 64 | 48 | 3 | 3 | 41 |
| 17 | ಉನ್ನತ ಶಿಕ್ಷಣ ಇಲಾಖೆ | 318890 | 317429 | 4 | 0 | 0 | 0 | 30 |
| 18 | ಸಹಕಾರ ಇಲಾಖೆ | 137615 | 136218 | 0 | 0 | 0 | 0 | 27 |
| 19 | ಲೋಕೋಪಯೋಗಿ,ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 2433 | 2416 | 0 | 0 | 0 | 0 | 3 |
| 20 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಗಣಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು) | 169152 | 169019 | 2 | 1 | 0 | 0 | 3 |
| 21 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 1777 | 1684 | 0 | 0 | 0 | 0 | 3 |

| ಕ್ರ.ಸಂ. | ಮುಖ್ಯ ಇಲಾಖೆ | ಒಟ್ಟಾರೆ ಜಿಎಸ್ ಸಿ ರಸೀದಿಗಳ ಸಂಖ್ಯೆ | ಒಟ್ಟಾರೆ ವಿಲೇವಾರಿಯಾದ ರಸೀದಿಗಳ ಸಂಖ್ಯೆ | ಒಟ್ಟಾರೆ ಸ್ವೀಕೃತಿ ಮೊದಲ ಮನವಿಗಳು | ಒಟ್ಟಾರೆ ಮೊದಲ ಮನವಿಗಳ ವಿಲೇವಾರಿ ಸಂಖ್ಯೆ | ಒಟ್ಟಾರೆ ಎರಡನೆಯ ಮನವಿಗಳ ಸ್ವೀಕೃತಿ ಸಂ | ಒಟ್ಟಾರೆ ಎರಡನೆಯ ಮನವಿಗಳ ವಿಲೇವಾರಿ ಸಂಖ್ಯೆ | ನಿಗದಿ ಪಡಿಸಿದ ದಿನಾಂಕದ ನಂತರ ಬಾಕಿ ಇರುವ ಸಂಖ್ಯೆ |
|---|---|---|---|---|---|---|---|---|
| 22 | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಅಂತರ್ಜಲ ನಿರ್ದೇಶನಾಲಯ | 785 | 672 | 0 | 0 | 0 | 0 | 2 |
| 23 | ವಸತಿ ಇಲಾಖೆ | 14642 | 14590 | 0 | 0 | 0 | 0 | 2 |
| 24 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 53 | 52 | 0 | 0 | 0 | 0 | 1 |
| 25 | ಆರ್ಥಿಕ ಇಲಾಖೆ | 12732251 | 12732246 | 13 | 6 | 0 | 0 | 1 |
| 26 | ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | 62785 | 62744 | 0 | 0 | 0 | 0 | 1 |
| 27 | ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆ | 1494 | 1494 | 0 | 0 | 0 | 0 | 0 |
| 28 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 826278 | 767324 | 0 | 0 | 0 | 0 | 0 |
| 29 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 1157 | 1157 | 0 | 0 | 0 | 0 | 0 |
| 30 | ಜಲ ಸಂಪನ್ಮೂಲ ಇಲಾಖೆ | 247 | 243 | 0 | 0 | 0 | 0 | 0 |
| 31 | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | 798 | 798 | 0 | 0 | 0 | 0 | 0 |
| | **ಒಟ್ಟು:** | **180400003** | **179685829** | **3164** | **2312** | **311** | **247** | **39599** |

**31/10/2018 ರಂದು 12:00:00 ರಂದು ದಾಖಲೆಗಳಂತೆ**

# ಅಧ್ಯಾಯ ೨೩: ಸ್ವೀಕೃತಿ ಮತ್ತು ವಿಲೇವಾರಿ ಅಕ್ಟೋಬರ್–೨೦೧೮– ಜಿಲ್ಲಾವಾರು

| ಕ್ರ.ಸಂ | ಜಿಲ್ಲೆ | ತಿಂಗಳ ಜಿ.ಎಸ್.ಸಿ ಸ್ವೀಕೃತಿಗಳ ಸಂಖ್ಯೆ | ತಿಂಗಳ ಜಿ.ಎಸ್.ಸಿ ವಿಲೇವಾರಿ ಸಂಖ್ಯೆ |
|---|---|---|---|
| 1 | ಹಾಸನ | 60287 | 65797 |
| 2 | ಹಾವೇರಿ | 50108 | 57252 |
| 3 | ಶಿವಮೊಗ್ಗ | 55899 | 62767 |
| 4 | ವಿಜಯಾಪುರ | 95935 | 122719 |
| 5 | ರಾಯಚೂರು | 105758 | 124206 |
| 6 | ರಾಮನಗರ | 36383 | 38967 |
| 7 | ಯಾದಗಿರಿ | 56617 | 79087 |
| 8 | ಮೈಸೂರು | 91400 | 100145 |
| 9 | ಮಂಡ್ಯ | 55735 | 62584 |
| 10 | ಬೀದರ್ | 64765 | 81404 |
| 11 | ಬಾಗಲಕೋಟೆ | 74409 | 78911 |
| 12 | ಬಳ್ಳಾರಿ | 88871 | 104927 |
| 13 | ಬೆಳಗಾವಿ | 135294 | 136980 |
| 14 | ಬೆಂಗಳೂರು ಗ್ರಾಮಾಂತರ | 41460 | 43171 |
| 15 | ಬೆಂಗಳೂರು | 317473 | 429911 |
| 16 | ಧಾರವಾಡ | 55833 | 70186 |
| 17 | ದಾವಣಗೆರೆ | 73210 | 91257 |
| 18 | ದಕ್ಷಿಣ ಕನ್ನಡ | 58674 | 63011 |
| 19 | ತುಮಕೂರು | 96135 | 103767 |
| 20 | ಚಾಮರಾಜ ನಗರ | 28231 | 31672 |
| 21 | ಚಿತ್ರದುರ್ಗ | 56043 | 60353 |
| 22 | ಚಿಕ್ಕಮಗಳೂರು | 44862 | 50448 |
| 23 | ಚಿಕ್ಕಬಳ್ಳಾಪುರ | 48567 | 52773 |
| 24 | ಗದಗ | 38985 | 46847 |
| 25 | ಕೋಲಾರ | 62872 | 69487 |
| 26 | ಕೊಪ್ಪಳ | 53131 | 57301 |
| 27 | ಕೊಡಗು | 20165 | 23494 |
| 28 | ಕಲಬುರಗಿ | 107202 | 135506 |
| 29 | ಉತ್ತರ ಕನ್ನಡ | 42590 | 43115 |
| 30 | ಉಡುಪಿ | 38424 | 40460 |
| | **ಒಟ್ಟು** | **2155318** | **2528505** |

**31/10/2018 ರಂದು 12:00:00 ರಂದು ದಾಖಲೆಗಳಂತೆ**

## ಅಧ್ಯಾಯ ೨ಈ: ಸ್ವೀಕೃತಿ ಮತ್ತು ವಿಲೇವಾರಿ ಅಕ್ಟೋಬರ್ ೨೦೧೮– ಇಲಾಖಾವಾರು

| ಕ್ರ.ಸಂ. | ಮುಖ್ಯ ಇಲಾಖೆ | ತಿಂಗಳ ಜಿ ಎಸ್ ಸಿ ಸ್ವೀಕೃತಿಗಳ ಸಂಖ್ಯೆ | ತಿಂಗಳ ಜಿ ಎಸ್ ಸಿ ವಿಲೇವಾರಿಯಾದ ಸಂಖ್ಯೆ |
|---|---|---|---|
| 1 | ಕಂದಾಯ ಇಲಾಖೆ | 1354700 | 1667231 |
| 2 | ಕಂದಾಯ ಇಲಾಖೆ(IGRS) | 238809 | 238956 |
| 3 | ಸಾರಿಗೆ ಇಲಾಖೆ | 175703 | 239147 |
| 4 | ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ | 95860 | 95804 |
| 5 | ಒಳಾಡಳಿತ ಇಲಾಖೆ | 89404 | 88259 |
| 6 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 68246 | 68935 |
| 7 | ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು) | 32030 | 34774 |
| 8 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 26655 | 26957 |
| 9 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 22785 | 22308 |
| 10 | ಕಾರ್ಮಿಕ ಇಲಾಖೆ | 17403 | 14191 |
| 11 | ನಗರಾಭಿವೃದ್ಧಿ ಇಲಾಖೆ | 8280 | 7205 |
| 12 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 8022 | 7656 |
| 13 | ಉನ್ನತ ಶಿಕ್ಷಣ ಇಲಾಖೆ | 4864 | 4742 |
| 14 | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ | 4260 | 4259 |
| 15 | ಇಂಧನ ಇಲಾಖೆ | 3700 | 3718 |
| 16 | ಸಹಕಾರ ಇಲಾಖೆ | 1528 | 1176 |
| 17 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ (ಪರಿಸರ) ಇಲಾಖೆ | 1020 | 1169 |
| 18 | ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | 909 | 829 |
| 19 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 228 | 263 |
| 20 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 207 | 187 |
| 21 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಗಣಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು) | 204 | 233 |
| 22 | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಅಂತರ್ಜಲ ನಿರ್ದೇಶನಾಲಯ | 165 | 128 |
| 23 | ಆರ್ಥಿಕ ಇಲಾಖೆ | 94 | 106 |
| 24 | ವಸತಿ ಇಲಾಖೆ | 79 | 111 |
| 25 | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | 63 | 38 |
| 26 | ಲೋಕೋಪಯೋಗಿ,ಬಂದರು ಮತ್ತು ಒಳನಾಡು ಜಲಸಾರಿಗೆ | 47 | 55 |
| 27 | ಜಲ ಸಂಪನ್ಮೂಲ ಇಲಾಖೆ | 34 | 43 |
| 28 | ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆ | 15 | 20 |
| 29 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 4 | 4 |
| 31 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 0 | 0 |
| 32 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 0 | 1 |
| | **ಒಟ್ಟು** | **2155318** | **2528505** |

**30/09/2018 ರಂದು 12:00:00 ರಂದು ದಾಖಲೆಗಳಂತೆ**

## ಅಧ್ಯಾಯ ೨ಉ: ವಿಳಂಬ ವಿಲೇವಾರಿ ಅಕ್ಟೋಬರ್ –೨೦೧೮– ಜಿಲ್ಲಾವಾರು

| ಕ್ರ.ಸಂ. | ಜಿಲ್ಲೆ | 0-3 ದಿನಗಳು | 4-7 ದಿನಗಳು | 8-15 ದಿನಗಳು | 16-30 ದಿನಗಳು | 30ಕ್ಕಿಂತ ಹೆಚ್ಚು ದಿನಗಳು | ಒಟ್ಟು |
|---|---|---|---|---|---|---|---|
| 1 | ಬೆಂಗಳೂರು | 35047 | 11879 | 16960 | 37149 | 4425 | 105460 |
| 2 | ಯಾದಗಿರಿ | 7203 | 319 | 122 | 56 | 36 | 7736 |
| 3 | ಬೀದರ್ | 6546 | 447 | 146 | 61 | 83 | 7283 |
| 4 | ರಾಯಚೂರು | 3375 | 973 | 490 | 177 | 180 | 5195 |
| 5 | ಕೊಪ್ಪಳ | 3554 | 751 | 427 | 66 | 39 | 4837 |
| 6 | ವಿಜಯಾಪುರ | 3670 | 539 | 90 | 149 | 179 | 4627 |
| 7 | ಬೆಳಗಾವಿ | 2722 | 823 | 514 | 280 | 240 | 4579 |
| 8 | ಮೈಸೂರು | 2758 | 875 | 529 | 93 | 43 | 4298 |
| 9 | ಕಲಬುರಗಿ | 2778 | 442 | 248 | 112 | 81 | 3661 |
| 10 | ಹಾಸನ | 3005 | 324 | 169 | 63 | 67 | 3628 |
| 11 | ಬಳ್ಳಾರಿ | 2528 | 575 | 132 | 33 | 80 | 3348 |
| 12 | ಕೊಡಗು | 1631 | 567 | 333 | 468 | 346 | 3345 |
| 13 | ಕೋಲಾರ | 2376 | 514 | 197 | 144 | 88 | 3319 |
| 14 | ಧಾರವಾಡ | 2080 | 353 | 160 | 191 | 218 | 3002 |
| 15 | ಮಂಡ್ಯ | 2139 | 462 | 121 | 73 | 84 | 2879 |
| 16 | ದಾವಣಗೆರೆ | 1709 | 189 | 86 | 121 | 231 | 2336 |
| 17 | ತುಮಕೂರು | 1632 | 255 | 163 | 103 | 151 | 2304 |
| 18 | ದಕ್ಷಿಣ ಕನ್ನಡ | 1101 | 173 | 250 | 121 | 576 | 2221 |
| 19 | ಹಾವೇರಿ | 1536 | 159 | 98 | 82 | 91 | 1966 |
| 20 | ಚಿಕ್ಕಮಗಳೂರು | 1243 | 148 | 182 | 109 | 223 | 1905 |
| 21 | ರಾಮನಗರ | 1183 | 186 | 94 | 46 | 71 | 1580 |
| 22 | ಬಾಗಲಕೋಟೆ | 911 | 214 | 129 | 104 | 101 | 1459 |
| 23 | ಬೆಂಗಳೂರು ಗ್ರಾಮಾಂತರ | 924 | 195 | 126 | 47 | 20 | 1312 |
| 24 | ಗದಗ | 1074 | 152 | 6 | 12 | 63 | 1307 |
| 25 | ಚಿತ್ರದುರ್ಗ | 992 | 157 | 61 | 24 | 23 | 1257 |
| 26 | ಚಿಕ್ಕಬಳ್ಳಾಪುರ | 843 | 110 | 26 | 11 | 17 | 1007 |
| 27 | ಶಿವಮೊಗ್ಗ | 547 | 148 | 18 | 73 | 58 | 844 |
| 28 | ಚಾಮರಾಜ ನಗರ | 273 | 96 | 270 | 15 | 39 | 693 |
| 29 | ಉಡುಪಿ | 187 | 21 | 10 | 23 | 176 | 417 |
| 30 | ಉತ್ತರ ಕನ್ನಡ | 158 | 23 | 9 | 6 | 57 | 253 |
| | **ಒಟ್ಟು** | **95725** | **22069** | **22166** | **40012** | **8090** | **188062** |

**31/10/2018 ರಂದು 12:00:00 ರಂದು ದಾಖಲೆಗಳಂತೆ**

# ಅಧ್ಯಾಯ ೨ಊ: ವಿಳಂಬ ವಿಲೇವಾರಿ ಅಕ್ಟೋಬರ್ ೨೦೧೮– ಇಲಾಖಾವಾರು

| ಕ್ರ.ಸಂ. | ಮುಖ್ಯ ಇಲಾಖೆ | 1ರಿಂದ3 ದಿನಗಳು | 4ರಿಂದ7ದಿನಗಳು | 8-14 ದಿನಗಳು | 15-30 ದಿನಗಳು | 30ಕ್ಕಿಂತ ಹೆಚ್ಚು ದಿನಗಳು | ಒಟ್ಟು |
|---|---|---|---|---|---|---|---|
| 1 | ಕಂದಾಯ ಇಲಾಖೆ | 77723 | 16087 | 5746 | 2273 | 1734 | 103563 |
| 2 | ಸಾರಿಗೆ ಇಲಾಖೆ | 1965 | 2634 | 14426 | 36042 | 3792 | 58859 |
| 3 | ಕಂದಾಯ ಇಲಾಖೆ(IGRS) | 6832 | 974 | 574 | 142 | 65 | 8587 |
| 4 | ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು) | 2230 | 653 | 444 | 619 | 1840 | 5786 |
| 5 | ಒಳಾಡಳಿತ ಇಲಾಖೆ | 2821 | 621 | 292 | 190 | 71 | 3995 |
| 6 | ನಗರಾಭಿವೃದ್ಧಿ ಇಲಾಖೆ | 781 | 438 | 387 | 523 | 492 | 2621 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 1403 | 263 | 106 | 81 | 6 | 1859 |
| 8 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 381 | 141 | 53 | 55 | 43 | 673 |
| 9 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 554 | 44 | 20 | 7 | 3 | 628 |
| 10 | ಕಾರ್ಮಿಕ ಇಲಾಖೆ | 256 | 33 | 4 | 5 | 2 | 300 |
| 11 | ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ | 275 | 8 | 5 | 5 | 1 | 294 |
| 12 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 179 | 1 | 24 | 15 | 0 | 219 |
| 13 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ (ಪರಿಸರ) ಇಲಾಖೆ | 24 | 50 | 32 | 28 | 37 | 171 |
| 14 | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ | 42 | 41 | 18 | 5 | 0 | 106 |
| 15 | ಇಂಧನ ಇಲಾಖೆ | 49 | 27 | 13 | 9 | 0 | 98 |
| 16 | ಸಹಕಾರ ಇಲಾಖೆ | 47 | 7 | 5 | 4 | 0 | 63 |
| 17 | ಉನ್ನತ ಶಿಕ್ಷಣ ಇಲಾಖೆ | 42 | 15 | 2 | 0 | 0 | 59 |
| 18 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 18 | 20 | 4 | 2 | 1 | 45 |
| 19 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 28 | 4 | 2 | 0 | 0 | 34 |
| 20 | ಆರ್ಥಿಕ ಇಲಾಖೆ | 26 | 0 | 0 | 0 | 0 | 26 |
| 21 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಗಣಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು) | 5 | 5 | 5 | 7 | 2 | 24 |
| 22 | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಅಂತರ್ಜಲ ನಿರ್ದೇಶನಾಲಯ | 18 | 3 | 0 | 0 | 0 | 21 |
| 23 | ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | 18 | 0 | 0 | 0 | 0 | 18 |
| 24 | ಜಲ ಸಂಪನ್ಮೂಲ ಇಲಾಖೆ | 6 | 0 | 1 | 0 | 0 | 7 |
| 25 | ಯುವ ಸಬಲೀಕರಣ ಮತ್ತು ಕ್ರೀಡೆ | 0 | 0 | 2 | 0 | 0 | 2 |
| 26 | ವಸತಿ ಇಲಾಖೆ | 1 | 0 | 1 | 0 | 0 | 2 |
| 27 | ಲೋಕೋಪಯೋಗಿ,ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 1 | 0 | 0 | 0 | 1 | 2 |
| 28 | **ಒಟ್ಟು** | **95725** | **22069** | **22166** | **40012** | **8090** | **188062** |

**31/10/2018 ರಂದು 12:00:00 ರಂದು ದಾಖಲೆಗಳಂತೆ**

## ಅಧ್ಯಾಯ ೨ ಖ: 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳು (ಅಕ್ಟೋಬರ್ –೨೦೧೮) – ಜಿಲ್ಲಾವಾರು

| ಕ್ರ.ಸಂ | 7 ಹಾಗೂ 7ಕ್ಕಿಂತ ಹೆಚ್ಚು ಬಾರಿ ವಿಳಂಬ ಮಾಡಿರುವ ಕಛೇರಿಗಳ ಸಂಖ್ಯೆ | |
|---|---|---|
| 1 | ಬೆಂಗಳೂರು | 204 |
| 2 | ಮಂಡ್ಯ | 55 |
| 3 | ಬೆಳಗಾವಿ | 55 |
| 4 | ಮೈಸೂರು | 52 |
| 5 | ಹಾಸನ | 47 |
| 6 | ಬಳ್ಳಾರಿ | 45 |
| 7 | ಕಲಬುರಗಿ | 40 |
| 8 | ವಿಜಯಪುರ | 39 |
| 9 | ತುಮಕೂರು | 38 |
| 10 | ಕೋಲಾರ | 37 |
| 11 | ರಾಯಚೂರು | 36 |
| 12 | ಬೀದರ್ | 36 |
| 13 | ಚಿಕ್ಕ ಮಗಳೂರು | 34 |
| 14 | ಯಾದಗೀರ್ | 34 |
| 15 | ಹಾವೇರಿ | 33 |
| 16 | ರಾಮನಗರ | 31 |
| 17 | ದಕ್ಷಿಣ ಕನ್ನಡ | 28 |
| 18 | ಬಾಗಲಕೋಟೆ | 27 |
| 19 | ಕೊಡಗು | 26 |
| 20 | ಧಾರವಾಡ | 26 |
| 21 | ಚಿಕ್ಕ ಬಳ್ಳಾಪುರ | 26 |
| 22 | ಕೊಪ್ಪಳ | 26 |
| 23 | ದಾವಣಗೆರೆ | 25 |
| 24 | ಚಿತ್ರದುರ್ಗ | 23 |
| 25 | ಬೆಂಗಳೂರು (ಗ್ರಾ) | 23 |
| 26 | ಗದಗ | 21 |
| 27 | ಶಿವಮೊಗ್ಗ | 16 |
| 28 | ಚಾಮರಾಜನಗರ | 10 |
| 29 | ಉತ್ತ್ರ ಕನ್ನ | 6 |
| 30 | ಉಡುಪಿ | 5 |
| | **Total** | **1104** |

31/10/2018 ರಂದು 12:00:00 ರಂದು ದಾಖಲೆಗಳಂತೆ

## ಅಧ್ಯಾಯ ೨ ಎ: ಪರಿಹಾರ ಕೋರಿ ಅರ್ಜಿಗಳು– ಇಲಾಖಾವಾರು

| ಕ್ರ.ಸಂ | ಇಲಾಖೆ | ಪರಿಹಾರ ಕೋರಿ ಅರ್ಜಿಗಳ ಸಂಖ್ಯೆ | ಕೋರಿದ ಪರಿಹಾರ (ರೂ) |
|---|---|---|---|
| 1 | ಕಂದಾಯ ಇಲಾಖೆ | 746 | 88415 |
| 2 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 103 | 13122 |
| 3 | ಸಾರ್ವಜನಿಕ ಶಿಕ್ಷಣ ಇಲಾಖೆ | 37 | 6840 |
| 4 | ಭೂಮಾಪನ ಮತ್ತು ಭೂಕಂದಾಯ ಇಲಾಖೆ | 34 | 2342 |
| 5 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 26 | 1470 |
| 6 | ನಗರ ಸಭೆಗಳು | 11 | 1040 |
| 7 | ಸಾರಿಗೆ ಇಲಾಖೆ | 2 | 60 |
| 8 | ಒಳಾಡಳಿತ ಇಲಾಖೆ | 6 | 640 |
| 9 | ಪಟ್ಟಣ ಪಂಚಾಯತ್ ಗಳು | 2 | 80 |
| 10 | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 1 | 20 |
| 11 | ವಾಣಿಜ್ಯ ತೆರಿಗೆ ಇಲಾಖೆ | 3 | 440 |
| 12 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಪೌರ ನಿಗಮಗಳು | 1 | 40 |
| 13 | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1 | 60 |
| 14 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 1 | 20 |
| | **ಒಟ್ಟು** | **974** | **114589** |

31/10/2018 ರಂದು 12:00:00 ರಂದು ದಾಖಲೆಗಳಂತೆ

**Disclaimer:** **Data may vary due to Technical updates between portals of various Departments and differential time these reports are drawn from the portal**

# ಸಕಾಲದಲ್ಲಿ ಸೇವೆ ನೀಡದಿದ್ದರೆ ಇಲಾಖಾ ವಿಚಾರಣೆ: ಕೆ.ಮಥಾಯ್

Monday, 15 Oct, 6.57 pm ಉಡುಪಿ

ಉಡುಪಿ: ಕಾಲಮಿತಿಯೊಳಗೆ ಸೇವೆಗಳನ್ನು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ 'ಸಕಾಲ' ಯೋಜನೆಯನ್ನು ಜಾರಿಗೆ ತಂದಿದೆ. ಮಧ್ಯವರ್ತಿಗಳ ಕಿರಿಕಿರಿ ಇಲ್ಲದೆ ನೇರವಾಗಿ ಅಧಿಕಾರಿಗಳಿಂದ ಸೇವೆ ಪಡೆದುಕೊಳ್ಳಬಹುದು ಎಂದು ಸಕಾಲ ಮಿಷನ್ ಆಡಳಿತಾಧಿಕಾರಿ ಕೆ.ಮಥಾಯ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಸಕಾಲ ಜನಜಾಗೃತಿ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಕಾಲ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ನಿರ್ದಿಷ್ಟ ಅವಧಿಯಲ್ಲಿ ತ್ವರಿತ ಸೇವೆ ನೀಡುವುದು ಪ್ರಮುಖ ಉದ್ದೇಶ. ಒಂದುವೇಳೆ ಕಾಲಮಿತಿಯೊಳಗೆ ಸೇವೆ ನೀಡದಿದ್ದರೆ, ಅಧಿಕಾರಿಗೆ ದಂಡ ವಿಧಿಸಲು ಅವಕಾಶವಿದೆ' ಎಂದು ಮಾಹಿತಿ ನೀಡಿದರು.

ಮಾಹಿತಿ ನೀಡುವ ಅವಧಿ ಮೀರಿದರೆ, ಪ್ರತಿದಿನಕ್ಕೆ ₹ 20ನಂತೆ ಅಧಿಕಾರಿಯಿಂದ ದಂಡ ವಸೂಲು ಮಾಡಿ ಅರ್ಜಿದಾರರಿಗೆ ನೀಡಲಾಗುವುದು. ಸೇವೆ ನೀಡಲು ವಿಳಂಬ ಮಾಡಿದರೆ, ನಿರಾಕರಿಸಿದೆ ಗೊತ್ತುಪಡಿಸಿದ ಅಧಿಕಾರಿ ವಿರುದ್ಧ ಮೇಲಧಿಕಾರಿಗೆ ದೂರು ಸಲ್ಲಿಸಬಹುದು ಎಂದು ತಿಳಿಸಿದರು.

ರಾಜ್ಯದಲ್ಲಿ 897 ಸೇವೆಗಳನ್ನು 'ಸಕಾಲ'ದಡಿ ಸೇರಿಸಲಾಗಿದೆ. ರಾಜ್ಯದ ಮಾದರಿಯನ್ನು ಇತರ ರಾಜ್ಯಗಳು ಅಳವಡಿಸಿಕೊಳ್ಳುತ್ತಿವೆ. ಬಾಂಗ್ಲಾದೇಶದ ಜಿಲ್ಲಾಧಿಕಾರಿಗಳ ತಂಡ ಈಚೆಗೆ ಭಾರತಕ್ಕೆ ಬಂದು ಸಕಾಲ ಯೋಜನೆಯ ತರಬೇತಿ ಪಡೆದು, ಅನುಷ್ಠಾನಗೊಳಿಸಿದೆ ಎಂದರು.

ಸಕಾಲ ಯೋಜನೆಗೆ ಪ್ರಧಾನಮಂತ್ರಿ ಎಕ್ಸಲೆನ್ಸ್ ಅವಾರ್ಡ್, ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಶಸ್ತಿ, ಗೂಗಲ್ ಇನ್ನೋವೇಟಿವ್ ಅವಾರ್ಡ್ ಮನ್ನಣೆ ದೊರೆತಿದೆ ಎಂದು ಶ್ಲಾಘಿಸಿದರು.

ಸಕಾಲ ಕೌಂಟರ್‌ನಲ್ಲಿ ಅರ್ಜಿ ದಾಖಲಿಸಿದರೆ, ತಕ್ಷಣ ಅರ್ಜಿದಾರರ ಮೊಬೈಲ್‌ಗೆ 15 ನೋಂದಣಿ ಸಂಖ್ಯೆಯನ್ನೊಳಗೊಂಡ ಸಂದೇಶ ಬರುತ್ತದೆ. ಈ ಸಂಖ್ಯೆ ಬಹುಮುಖ್ಯವಾಗಿದ್ದು, ಮುಂದಿನ ಎಲ್ಲ ಹಂತಗಳಲ್ಲಿ ಮಾಹಿತಿ ಪಡೆಯಲು ನೆರವಿಗೆ ಬರುತ್ತದೆ. ಸೇವೆ ವಿಳಂಬವಾದರೆ, ನಿರಾಕರಿಸಿದರೆ ಅಧಿಕರಿಗಳ ವಿರುದ್ಧ ದೂರು ನೀಡಲು ಸಹಾಯವಾಗುತ್ತದೆ ಎಂದರು.

ಬಹುತೇಕ ಜಿಲ್ಲೆಗಳಲ್ಲಿ ಸಾರ್ವಜನಿಕರು ಸಕಾಲ ಕೌಂಟರ್‌ನಲ್ಲಿ ಸೇವೆ ಪಡೆಯುತ್ತಿಲ್ಲ. ಪರಿಣಾಮ ಸಾವಿರಾರು ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿವೆ. ಮಧ್ಯವರ್ತಿಗಳಿಗೆ ಹಣಕೊಟ್ಟು ಸೇವೆಗಳನ್ನು ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಈ ವ್ಯವಸ್ಥೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಮಥಾಯ್ ತಿಳಿಸಿದರು.

ಎಲ್ಲ ಸರ್ಕಾರಿ ಕಚೇರಿಗಳ ಪ್ರಮುಖ ಸ್ಥಳಗಳಲ್ಲಿ ಸಕಾಲ ಜಾಹೀರಾತು ಪ್ರದರ್ಶನ ಮಾಡಬೇಕು. ಯಾವ ಸೇವೆಗಳು ಲಭ್ಯವಿದೆ. ಎಷ್ಟು ಅವಧಿಯಲ್ಲಿ ಸೇವೆ ಸಿಗಲಿದೆ. ಯಾವ ಇಲಾಖೆಯನ್ನು ಸಂಪರ್ಕಿಸಬೇಕು ಎಂಬ ವಿವರಗಳನ್ನೊಳಗೊಂಡ ಫಲಕವನ್ನು ಹಾಕಲು ಸೂಚನೆ ನೀಡಲಾಗಿದೆ ಎಂದರು.

080-44554455 ನಂಬರ್‌ಗೆ ಕರೆ ಮಾಡಿದರೆ ಅಗತ್ಯ ಮಾಹಿತಿಗಳನ್ನು ಪಡೆದುಕೊಳ್ಳಬಹದು. ಜತೆಗೆ, www.sakala.kar.nic ವೆಬ್ ಸೈಟ್‌ನಲ್ಲೂ ಮಾಹಿತಿ ಪಡೆಯಬಹುದು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ವಿದ್ಯಾಕುಮಾರಿ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯದರ್ಶಿ ನಾಗೇಶ್ ರಾಯ್ಕರ್ ಉಪಸ್ಥಿತರಿದ್ದರು.

## 18.10.2018 ಮಂಗಳೂರಿನಲ್ಲಿ ಮಥಾಯಿ

**ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸಕಾಲ ಕೌಂಟರ್ ಹಾಗೂ ಬೋರ್ಡ್ ಅಳವಡಿಸದಿದ್ದರೆ ಶಿಸ್ತುಕ್ರಮ: ಕೆ. ಮಥಾಯಿ ಎಚ್ಚರಿಕೆ**

ಸಾರ್ವಜನಿಕರಿಗೆ ನಿಗದಿತ ಅವಧಿಯೊಳಗೆ ಸರ್ಕಾರಿ ಸೇವೆಗಳನ್ನು ಒದಗಿಸುವ `ಸಕಾಲ' ಯೋಜನೆ ಕುರಿತು ಜನರಿಗೆ ಮಾಹಿತಿ ನೀಡಲು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸಕಾಲ ಕೌಂಟರ್ ಹಾಗೂ ಬೋರ್ಡ್ ಅಳವಡಿಸಬೇಕು. ಅಳವಡಿಸದೆ ಇರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಸಕಾಲ ಮಿಷನ್ ಆಡಳಿತಾಧಿಕಾರಿ ಕೆ. ಮಥಾಯಿ ಎಚ್ಚರಿಕೆ ನೀಡಿದ್ದಾರೆ. ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಕಾಲ ಯೋಜನೆ ಕುರಿತು ಸರ್ಕಾರಿ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಬಹುತೇಕ ಯಾವ ಕಚೇರಿಯಲ್ಲೂ ಸಕಾಲ ಬೋರ್ಡ್ ಅಳವಡಿಸಿಲ್ಲ.



ಇದರಿಂದಾಗಿ ಅತ್ಯುತ್ತಮ ಯೋಜನೆ ಕುರಿತು ಜನರಿಗೆ ಮಾಹಿತಿ ಸಿಗುತ್ತಿಲ್ಲ ಎಂದು ನಾಗರಿಕ ಮುಖಂಡರು ಸಭೆಯಲ್ಲಿ ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಥಾಯಿ, ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಸಕಾಲ ಯೋಜನೆಯ ಕೌಂಟರ್ ಮತ್ತು ಬೋರ್ಡ್ ಅಳವಡಿಸಬೇಕು. ಅಲ್ಲದೆ ಸಕಾಲ ಅಡಿಯಲ್ಲಿ ಲಭ್ಯವಿರುವ ಸೇವೆಗಳು ಮತ್ತು ಸೇವೆ ಒದಗಿಸಲು ಅವಧಿಯ ಗಡುವನ್ನೂ ನಮೂದಿಸಬೇಕು. ಈ ವ್ಯವಸ್ಥೆ ಮಾಡದ ಕಚೇರಿ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದರು. ಸಕಾಲ ಯೋಜನೆಯಡಿ ಪ್ರಸ್ತುತ 897 ಸೇವೆಗಳನ್ನು ನೀಡಲಾಗುತ್ತಿದ್ದು, ಇದನ್ನು ಸಾವಿರಕ್ಕೆ ಏರಿಸುವ ಗುರಿ ಹೊಂದಲಾಗಿದೆ. ಕೆಲವೇ ತಿಂಗಳುಗಳಲ್ಲಿ ಈ ಪ್ರಕ್ರಿಯೆ ನಡೆಯಲಿದೆ ಎಂದು ಮಥಾಯಿ ತಿಳಿಸಿದರು. ಬೆಂಗಳೂರಿನ ಬಿಬಿಎಂಪಿಯಲ್ಲಿ ಸಕಾಲದ ಅಡಿ ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸುವ ಪ್ರಾಯೋಗಿಕ ವ್ಯವಸ್ಥೆ ಜಾರಿಗೊಳಿಸಲಾಗಿದೆ.

ಕಂದಾಯ ಇಲಾಖೆಯ `ಖಾತಾ' ಸೇವೆಯನ್ನು ಮಾತ್ರ ಪ್ರಸ್ತುತ ಇದರಲ್ಲಿ ಅಳವಡಿಸಲಾಗಿದ್ದು, ಸಾರ್ವಜನಿಕರು ಆನ್‌ಲೈನ್‌ನಲ್ಲೇ ಅರ್ಜಿ, ಶುಲ್ಕ ಸಲ್ಲಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇತರ ಸೇವೆಗಳಿಗೂ ಆನ್‌ಲೈನ್ ಅರ್ಜಿ ಸಲ್ಲಿಸುವ ವ್ಯವಸ್ಥೆಯ ಕುರಿತು ಪರಿಶೀಲನೆ ನಡೆಯಲಿದೆ ಎಂದರು. ಪ್ರತಿ ಸರ್ಕಾರಿ ಕಚೇರಿಯಲ್ಲೂ ನಿಗದಿತ ಸೇವೆಗಳು ಸಕಾಲ ವ್ಯಾಪ್ತಿಗೆ ಬರುತ್ತವೆ. ಗಡುವಿನ ಒಳಗೆ ಅರ್ಜಿ ವಿಲೇವಾರಿ ಮಾಡದಿದ್ದರೆ ಆ ಅಧಿಕಾರಿಯ ಮೇಲಧಿಕಾರಿಗೆ ಮೇಲ್ಮನವಿ ಸಲ್ಲಿಸಬೇಕು, ಅವರೂ 15 ದಿನಗಳಿಗಿಂತ ವಿಳಂಬ ಮಾಡಿದರೆ ಜಿಲ್ಲಾಧಿಕಾರಿಗೆ ದೂರು ನೀಡಿ, ಅವರೂ ಮಾಡದಿದ್ದರೆ ಜಿಲ್ಲಾಧಿಕಾರಿಗೂ ದಂಡ ವಿಧಿಸುವ ಕಾನೂನಿದೆ. ಸೇವೆ ಒದಗಿಸಬೇಕಾದ ಗಡುವಿನ ಬಳಿಕ ದಿನಕ್ಕೆ 20 ರೂ.ನಂತೆ ತಪ್ಪಿತಸ್ಥ ಅಧಿಕಾರಿಯಿಂದ ವಸೂಲಿ ಮಾಡಿ ಅರ್ಜಿದಾರರಿಗೆ ನೀಡಲಾಗುವುದು. ಆದರೆ ಇಷ್ಟು ಉತ್ತಮ ವ್ಯವಸ್ಥೆಯನ್ನು ಜನರು ಉಪಯೋಗ

ಮಾಡುತ್ತಿಲ್ಲ ಎಂದು ಮಥಾಯಿ ಹೇಳಿದರು. ಸಕಾಲ ಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದ ಅಧಿಕಾರಿಗಳನ್ನು ನಾಗರಿಕ ಪ್ರಮುಖರು ಸಭೆಯಲ್ಲಿ ತರಾಟೆಗೆ ತೆಗೆದುಕೊಂಡ್ರು.

ಇದೇ ಕಾರಣಕ್ಕೆ ಪ್ರಮುಖ ಇಲಾಖೆಗಳ ಅಧಿಕಾರಿಗಳು ಸಭೆಗೆ ಹಾಜರಾಗಲೇ ಇಲ್ಲ, ಸಕಾಲದಲ್ಲಿ ಅರ್ಜಿ ಸಲ್ಲಿಸಿದರೂ ಯಾವ ಸೇವೆಯೂ ಗಡುವಿನ ಒಳಗೆ ಸಿಗುತ್ತಿಲ್ಲ. ಮಂಗಳೂರಿನ ಯಾವ ಸರ್ಕಾರಿ ಕಚೇರಿಯಲ್ಲೂ ಸಕಾಲ ಬೋರ್ಡ್ ಆಗಲೀ, ಕೌಂಟರ್ ಆಗಲೀ ಇಲ್ಲ. ಕೇವಲ ಆದಾಯ ಸರ್ಟಿಫಿಕೆಟ್‌ಗಾಗಿ ದಿನಗಟ್ಟಲೆ ಅಲೆಸುತ್ತಿದ್ದಾರೆ. ಲೋಕಾಯುಕ್ತ ದಾಳಿಯಂತೆ ಸಕಾಲ ಆಡಳಿತಾಧಿಕಾರಿಗಳು ದಿಢೀರ್ ದಾಳಿ ನಡೆಸಿ ಪರಿಶೀಲನೆ ಮಾಡಬೇಕು ಎಂದು ಸಾಮಾಜಿಕ ಕಾರ್ಯಕರ್ತ ಹನುಮಂತ ಕಾಮತ್ ಒತ್ತಾಯಿಸಿದರು. ಸಕಾಲದಲ್ಲಿ ತಾತ್ಕಾಲಿಕ ಲೈಸನ್ಸ್ ನೀಡಲು 3 ದಿನಗಳ ಗಡುವಿದೆ ಎಂದು ಆರ್‌ಟಿಒ ಅಧಿಕಾರಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಸಿ ತಿಳಿಸಿದ್ರು. ತಾತ್ಕಾಲಿಕ ಲೈಸನ್ಸ್ ನೀಡಲು ಒಂದು ತಿಂಗಳು ಸತಾಯಿಸುತ್ತಾರೆ. ಇಲ್ಲಿ ಹೇಳುವುದೇ ಬೇರೆ, ಅಲ್ಲಿ ಮಾಡುವುದೇ ಬೇರೆ. ಡ್ರೈವಿಂಗ್ ಲೈಸನ್ಸ್‌ಗೆ 3 ತಿಂಗಳು ಕಾಯಬೇಕು. ತಾಲೂಕು ಕಚೇರಿಯಲ್ಲಂತೂ ಯಾವುದೇ ಸೇವೆ ಸಕಾಲದಲ್ಲಿ ಒದಗುತ್ತಿಲ್ಲ ಎಂದು ಕಾಮತ್ ತರಾಟೆಗೆ ತೆಗೆದುಕೊಂಡರು. ಜನರು ಅರ್ಜಿ ನೀಡಿದರೆ ಅಧಿಕಾರಿಗಳೇ ಅದನ್ನು ಸಕಾಲದಲ್ಲಿ ಸೇರಿಸಬೇಕು, ಸಕಾಲ ಜಾಗೃತಿಗೆ ಕಾಲೇಜುಗಳಲ್ಲಿ ಅಧಿಕಾರಿಗಳಿಂದ ಜಾಗೃತಿ ಕಾರ್ಯಕ್ರಮ ನಡೆಸಬೇಕು ಎಂಬ ಒತ್ತಾಯ ಕೇಳಿಬಂತು



ಉದಯವಾಣಿ

## 'ಸಕಾಲ'ದಲ್ಲಿ ಸೇವೆ ಸಿಗದಿದ್ದರೆ ಸ್ವಯಂಪ್ರೇರಿತ ದಂಡ ಪ್ರಸ್ತಾವ

# ಮುಂದಿನ ಹೆಜ್ಜೆ 'ಸೇವಾ ಸಿಂಧು': ಮಥಾಯ್

ಉಡುಪಿ, ಅ. 15: 'ಸಕಾಲ' ಯೋಜನೆಯಡಿ ನಾಗರಿಕರಿಗೆ ನಿಗದಿತ ಸಮಯದಲ್ಲಿ ಸೇವೆ ಲಭಿಸದೆ ಇದ್ದಲ್ಲಿ ದಂಡ ವಿಧಿಸುವ ಅವಕಾಶವಿದೆ. ಈಗ ದಂಡ ಕೇಳದಿರುವ ಕಾರಣ ಸರಿಯಾಗಿ ಜಾರಿಯಾಗುತ್ತಿಲ್ಲ.ಮುಂದೆಸಕಾಲದಲ್ಲಿ ಸೇವೆ ಸಿಗದಿದ್ದರೆ ಉತ್ತರದಾಯಿ ಅಧಿಕಾರಿಗಳಿಂದ ಸ್ವಯಂಪ್ರೇರಿತ ದಂಡ ವಸೂಲಿ ಪ್ರಸ್ತಾವ ಇದೆ ಎಂದು ಸಕಾಲ ಮಿಶನ್ ಆಡಳಿತಾಧಿಕಾರಿ ಕೆ. ಮಥಾಯ್ ಹೇಳಿದರು.

ಸಕಾಲ ಮಿಶನ್ ಹಾಗೂ ಸಿಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿ ಸೋಮವಾರ ಅಧಿಕಾರಿಗಳಿಗೆ ಏರ್ಪಡಿಸಿದ 'ಸಕಾಲ ಜನ ಜಾಗೃತಿ' ಕಾರ್ಯಕ್ರಮದಲ್ಲಿ ಅವರು ಮಾಹಿತಿ ನೀಡಿದರು. ಒಟ್ಟು 897 ಸೇವೆಗಳು ಸಕಾಲ ಯೋಜನೆಯಡಿ ಸಿಗುತ್ತಿವೆ. ಆನ್‌ಲೈನ್ ಅರ್ಜಿ ಸಲ್ಲಿಕೆ, ಶುಲ್ಕ ಪಾವತಿ, ಪ್ರಮಾಣಪತ್ರ ರವಾನಿಸುವ 'ಸೇವಾ ಸಿಂಧು' ಯೋಜನೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಜಾರಿಯಾಗಿದೆ. ರಾಜ್ಯಕ್ಕೆ ವಿಸ್ತರಿಸಲಾಗುವುದು ಎಂದರು.

ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ದ.ಕ., ಉಡುಪಿ ಜಿಲ್ಲೆಯಲ್ಲಿ ಸಕಾಲ ಸೇವೆ ಉತ್ತಮವಾಗಿದೆ. ಆದರೆ ಇಲ್ಲೂ ದೂರುಗಳಿವೆ. ಸಕಾಲ ಕೌಂಟರ್‌ನಲ್ಲಿ ಅರ್ಜಿ ಸಲ್ಲಿಸುವಾಗಲೇ ದೂರವಾಣಿ ಸಂಖ್ಯೆ ನೀಡಬೇಕು. ತತ್‌ಕ್ಷಣ 15 ಅಂಕಿಗಳ ಎಸ್‌ಎಂಎಸ್ ಸಂದೇಶ ಬರುತ್ತದೆ. ಈ ಸಂಖ್ಯೆ ಮುಂದೆ ವಿಚಾರಣೆ, ದೂರು ಸಲ್ಲಿಕೆ ಸಂದರ್ಭ ಅಗತ್ಯ ಎಂದರು.

ಗ್ರಾ.ಪಂ.ನಲ್ಲಿ 11 ಸೇವೆಗಳಿವೆ. ಮತ್ತೆ ಆರು ಸೇವೆಗಳು ತಂತ್ರಾಂಶದಲ್ಲಿ ಸೇರದ ಕಾರಣ ಲಭ್ಯವಾಗುತ್ತಿಲ್ಲ ಎಂದು ಜಿ.ಪಂ. ಉಪ ಕಾರ್ಯದರ್ಶಿ ನಾಗೇಶ ರಾಯ್ಕರ್ ತಿಳಿಸಿದರು.

**ಬಾಂಗ್ಲಾ ದೇಶಕ್ಕೂ 'ಸಕಾಲ'**

ಸಕಾಲ ಯೋಜನೆಯನ್ನು ಇತರ ರಾಜ್ಯಗಳೂ ಅನುಸರಿಸುತ್ತಿವೆ. ಬಾಂಗ್ಲಾ ದೇಶದ ಜಿಲ್ಲಾಧಿಕಾರಿಗಳಿಗೆ ಮೂರು ಬಾರಿ ತರಬೇತಿ ನೀಡಿದ್ದೇನೆ. ಪ್ರಧಾನ ಮಂತ್ರಿ, ಕಾಮನ್‌ವೆಲ್ತ್, ಗೂಗಲ್ ಇನ್ನೋವೇಶನ್ ಪ್ರಶಸ್ತಿಗಳು ಸಿಕ್ಕಿವೆ ಎಂದು ಮಥಾಯ್ ಹೇಳಿದರು.

**ಜಿಲ್ಲಾಧಿಕಾರಿಗೂ ದಂಡ**

ಓರ್ವ ಅಧಿಕಾರಿಗೆ ಏಳು ಬಾರಿ ದಂಡ ವಿಧಿಸುವಂತಾದರೆ ಇಲಾಖಾ ತನಿಖೆ ನಡೆಸಬಹುದು. ಯೋಜನೆ ಬಲಪಡಿಸಲು ಹೆಚ್ಚುವರಿ ಕಾರ್ಯದರ್ಶಿ ರಾಜೀವ್ ಚಾವ್ಲಾರನ್ನು ನೇಮಿಸಲಾಗಿದೆ. ಸಕಾಲದಲ್ಲಿ ಸೇವೆ ಸಲ್ಲಿಸದ ಡಿಸಿಗೂ ದಂಡ ವಿಧಿಸಿದ ಉದಾಹರಣೆ ಇದೆ ಎಂದರು.

**ಉಡುಪಿ ಜಿಲ್ಲೆ: 1ನೇ ಸ್ಥಾನಕ್ಕೇರಲು ಕರೆ**

ಕಳೆದ ಐದಾರು ತಿಂಗಳಿಂದ ಉಡುಪಿ ಜಿಲ್ಲೆ ಅರ್ಜಿ ಇತ್ಯರ್ಥದಲ್ಲಿ ಎರಡನೇ ಸ್ಥಾನದಲ್ಲಿದೆ. ಅರ್ಜಿ ಸ್ವೀಕಾರದಲ್ಲಿ 19ನೇ ಸ್ಥಾನದಲ್ಲಿದೆ. ನಾವು ಅರ್ಜಿ ಇತ್ಯರ್ಥದಲ್ಲಿ ಪ್ರಥಮ ಸ್ಥಾನಕ್ಕೇರಲು ಪ್ರಯತ್ನಿಸಬೇಕಾಗಿದೆ ಎಂದು ಅಪರ ಜಿಲ್ಲಾಧಿಕಾರಿ ವಿದ್ಯಾಕುಮಾರಿ ಹೇಳಿದರು.

ಸಕಾಲ ಸಹಾಯವಾಣಿ
**080-44554455**
ವೆಬ್‌ಸೈಟ್
**www.sakala.kar.nic.in**

**ಸಕಾಲ ಕೌಂಟರ್, ಫಲಕ ಪ್ರದರ್ಶನ ಕಡ್ಡಾಯ**

ವಿವಿಧ ಇಲಾಖೆಗಳಲ್ಲಿ ಸಕಾಲ ಕೌಂಟರ್ ಇದ್ದರೂ ಅದರ ಮೂಲಕ ಅರ್ಜಿ ಸಲ್ಲಿಕೆಯಾಗುತ್ತಿಲ್ಲ, ಸಾರ್ವಜನಿಕರು ಈ ಕೌಂಟರ್ ಮೂಲಕವೇ ಅರ್ಜಿ ಸಲ್ಲಿಸಿ ಸ್ವೀಕೃತಿ ಪಡೆಯಬೇಕು. ಪ್ರತಿ ನಿಯೋಜಿತ ಅಧಿಕಾರಿ ಕಚೇರಿಯಲ್ಲಿ ಸಕಾಲದಲ್ಲಿ ಸಿಗುವ ವಿವಿಧ ಯೋಜನೆಗಳ ಹೆಸರು, ಸೇವೆ ಲಭ್ಯವಾಗುವ ದಿನಗಳು, ನಿಯೋಜಿತ ಅಧಿಕಾರಿ, ಮೇಲ್ಮನವಿ ಸಲ್ಲಿಸಬೇಕಾದ ಅಧಿಕಾರಿಗಳ ಹೆಸರು, ಪದನಾಮದೊಂದಿಗೆ ಫಲಕಗಳನ್ನು ಕಡ್ಡಾಯವಾಗಿ ಹಾಕಿರಬೇಕು. ರಾಜ್ಯದಲ್ಲಿ ಸುಮಾರು 20,000 ನಿಯೋಜಿತ ಅಧಿಕಾರಿಗಳಿದ್ದಾರೆ. ಪೊಲೀಸ್ ಠಾಣೆಯಲ್ಲಿ ದೂರು ದಾಖಲಾದ ತತ್‌ಕ್ಷಣ ಎಫ್‌ಐಆರ್ ದಾಖಲಾಗಬೇಕು. ಸಬ್ ರಿಜಿಸ್ಟ್ರಾರ್ ಇಲಾಖೆಯಲ್ಲಿ ಋಣಭಾರ ಪತ್ರ (ಇಸಿ) 24 ಗಂಟೆಗಳೊಳಗೆ ನೀಡಬೇಕು, ಲರ್ನಿಂಗ್ ಲೈಸನ್ಸ್ 3 ದಿನಗಳಿಂದ ಒಂದು ದಿನಕ್ಕೆ ಇಳಿಸುವ ಪ್ರಸ್ತಾವವಿದೆ. ಈ ಸಮಯದಲ್ಲಿ ದೊರಕದೆ ಹೋದಲ್ಲಿ ಸಂಬಂಧಿತ ಅಧಿಕಾರಿಗಳು ದಂಡ ಪಾವತಿಸಬೇಕು.

- ಕೆ. ಮಥಾಯ್, ಸಕಾಲ ಮಿಶನ್ ಆಡಳಿತಾಧಿಕಾರಿ

Manipal Edition
16 Oct, 2018 Page No. 14
Powered by : eReleGo.com

16.10.2018 ಭಟ್ಕಳ ಉಪವಿಭಾಧಿಕಾರಿಗಳ ಕಛೇರಿಯಲ್ಲಿ ಅಧಿಕಾರಿ/ ನೌಕರರನ್ನು ಉದ್ದೇಶಿಸಿ ಕೆ. ಮಥಾಯಿ, ಆಡಳಿತಾಧಿಕಾರಿಗಳು ಸಕಾಲ ಯೋಜನೆಯ ಕುರಿತು ಮಾತುಕತೆ ನಡೆಸಿದರು.





ಉದಯವಾಣಿ

ಸಕಾಲದ ಮೂಲ ಆಶಯವನ್ನೇ ಮರೆತ ಸರಕಾರ

# 35 ಸಾವಿರ ಅರ್ಜಿ ಸಕಾಲದಲ್ಲಿ ಬಾಕಿ!

## ಒಂದು ಅರ್ಜಿ ವಿಳಂಬಕ್ಕೆ ದಿನಕ್ಕೆ 20 ರೂ. ಇನ್ನೂ ವಿಧಿಸಿಲ್ಲ ಅಧಿಕಾರಿಗಳಿಗೆ ದಂಡ

ಎಂ. ಕೀರ್ತಿಪ್ರಸಾದ್

**ಬೆಂಗಳೂರು, ಅ. 22: ಸಾರ್ವಜನಿಕರು ಸರಕಾರದ ಸೇವೆಗಳನ್ನು ತ್ವರಿತವಾಗಿ ಪಡೆಯಲು ಅನುಕೂಲವಾಗುವಂತೆ ಈ ವರೆಗೆ 897 ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದ್ದು, ಸೇವೆಗಳ ಸಂಖ್ಯೆಯನ್ನು 1,000ಕ್ಕೆ ವಿಸ್ತರಿಸಲು ಸರಕಾರ ಚಿಂತಿಸಿದೆ. ಆದರೆ ಈಗಾಗಲೇ ಸಕಾಲದಡಿ ಸಲ್ಲಿಕೆಯಾದ ಅರ್ಜಿಗಳ ಪೈಕಿ ಅವಧಿ ಮೀರಿ 35,000 ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದುಬಿಟ್ಟಿವೆ!**

ಒಂದೆಡೆ ವಿಲೇವಾರಿಯಾಗದೆ ಉಳಿಯುತ್ತಿರುವ ಅರ್ಜಿಗಳ ಸಂಖ್ಯೆ ಹೆಚ್ಚಾಗುತ್ತಿದ್ದರೆ, ಇನ್ನೊಂದೆಡೆ ಪ್ರತಿದಿನ ವಿಳಂಬ ವಿಲೇವಾರಿಗೆ ಸಂಬಂಧಪಟ್ಟ ಅಧಿಕಾರಿಗೆ 20 ರೂ. ದಂಡ ವಿಧಿಸುವ, ಅರ್ಜಿದಾರರಿಗೆ ಪರಿಹಾರ ನೀಡುವ ಪ್ರಕ್ರಿಯೆಯೂ ಸ್ಥಗಿತಗೊಂಡಿದೆ. ಇದರಿಂದ ಬಹುತೇಕ ಇಲಾಖೆಗಳ ಅಧಿಕಾರಿಗಳು ಸಕಾಲದಲ್ಲಿ ಅರ್ಜಿ ವಿಲೇವಾರಿ ಮಾಡದಿದ್ದರೂ ಯಾವುದೇ ಕ್ರಮವಿಲ್ಲದಂತಾಗಿದ್ದು, ಸಕಾಲದ ಮೂಲ ಆಶಯವೇ ಈಡೇರದಂತಾಗಿದೆ.

ಸಕಾಲ

**ಪರಿಹಾರ ಕೇಳಿದರೂ ಕೊಡುತ್ತಿಲ್ಲ!**

ಸಕಾಲದಡಿ ಸಲ್ಲಿಕೆಯಾದ ಅರ್ಜಿಯಡಿ ಆಯ್ದ ಸೇವೆಯನ್ನು ಇಂತಿಷ್ಟು ದಿನದಲ್ಲಿ ವಿಲೇವಾರಿ ಮಾಡಬೇಕು ಎಂಬ ನಿಯಮವಿದೆ. ಒಂದೊಮ್ಮೆ ಸಕಾರಣವಿಲ್ಲದೆ ವಿಳಂಬ ಮಾಡಿದರೆ ಸಂಬಂಧಪಟ್ಟ ಅಧಿಕಾರಿಗೆ ಅವಧಿ ಮುಗಿದ ಬಳಿಕ ಪ್ರತಿ ದಿನದ ವಿಳಂಬಕ್ಕೆ 20 ರೂ. ದಂಡ ವಿಧಿಸಿ ಅದನ್ನು ಅರ್ಜಿದಾರರಿಗೆ ನೀಡಬಹುದು. ಕಾಲಮಿತಿ ಮುಗಿದರೂ ಸೇವೆ ಒದಗಿಸದಿದ್ದರೆ ಅದನ್ನು ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದರೆ ಸಕ್ಷಮ ಪ್ರಾಧಿಕಾರವು ಅಧಿಕಾರಿಗೆ ದಂಡ ವಿಧಿಸಿ ಪರಿಹಾರ ಕೊಡಿಸಬೇಕು. ಬಹಳಷ್ಟು ಮಂದಿ ಮೇಲ್ಮನವಿ ಸಲ್ಲಿಸದ ಕಾರಣ ಪರಿಹಾರ ಪಡೆಯುತ್ತಿಲ್ಲ, ಹಲವು ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಿದರೂ ಹಿರಿಯ ಅಧಿಕಾರಿಗಳು ಪರಿಹಾರ ಕೊಡಿಸಲು ಆಸಕ್ತಿ ತೋರುತ್ತಿಲ್ಲ.

**ಸಕಾಲದಡಿ ಅವಧಿ ಮೀರಿ ವಿಲೇವಾರಿಯಾಗದ ಅರ್ಜಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ತಪಾಸಣೆ ಆರಂಭಿಸಲಾಗಿದೆ. ಪರಿಶೀಲನೆ ವೇಳೆ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರಕಾರದಿಂದ ನಿರ್ದೇಶನ ಕೊಡಲಾಗುವುದು. ಸಕಾಲ ಯೋಜನೆ ಸೌಲಭ್ಯಗಳ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಆದ್ಯತೆ ನೀಡಲಾಗುವುದು.**
**-ಕೆ. ಮಥಾಯಿ,** ಸಕಾಲ ಆಡಳಿತಾಧಿಕಾರಿ

**1 ಲಕ್ಷ ರೂ. ಪರಿಹಾರ**

ಅರ್ಜಿ ವಿಲೇವಾರಿ ವಿಳಂಬಕ್ಕೆ ಈವರೆಗೆ ಒಟ್ಟು 1 ಲಕ್ಷ ರೂ. ಪರಿಹಾರ ನೀಡಲಾಗಿದೆ. ಆದರೆ ವಾಸ್ತವವಾಗಿ ಪ್ರತಿ ಅರ್ಜಿಯ ವಿಳಂಬ ವಿಲೇವಾರಿಗೆ ಸೂಕ್ತ ದಂಡ ವಿಧಿಸಿದ್ದೇ ಆದರೆ ಅರ್ಜಿದಾರರಿಗೆ ಈವರೆಗೆ ಕೋಟ್ಯಂತರ ರೂ. ಪರಿಹಾರ ಸಿಗುತ್ತಿತ್ತು. ವಿಲೇವಾರಿಯಾಗದೇ ಉಳಿದಿರುವ 35 ಸಾವಿರ ಅರ್ಜಿದಾರರಿಗೆ ಒಂದು ದಿನದ ವಿಳಂಬಕ್ಕೆ ತಲಾ 20 ರೂ.ನಂತೆ ಪರಿಹಾರ ನೀಡುವುದೇ ಆದರೆ ಏಳು ಲಕ್ಷ ರೂ. ಪರಿಹಾರ ಸಿಗಲಿದೆ.

Manipal Edition
23 Oct, 2018 Page No. 1
Powered by : eReleGo.com

******